# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | (816) 79 |
| ಸದಸ್ಯರ ಹೆಸರು | : | ಶ್ರೀ ರಘು ಆರ್<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 24.08.2026 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ<br>ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಸಾಲಿನಲ್ಲಿ ಮೈಸೂರು ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸರ್ಕಾರ ವೆಚ್ಚ ಮಾಡಿರುವ ಅನುದಾನವೆಷ್ಟು; (ಮಾಹಿತಿ ನೀಡುವುದು) | 2025-26ನೇ ಸಾಲಿನಲ್ಲಿ ಮೈಸೂರು ದಸರಾ ಮಹೋತ್ಸವಕ್ಕೆ ಸರ್ಕಾರದಿಂದ ಬಿಡುಗಡೆಯಾದ ಅನುದಾನದಿಂದ ದಸರಾ ಉನ್ನತ ಮಟ್ಟದ ಸಮಿತಿ ಹಾಗೂ ಕಾರ್ಯಕಾರಿ ಸಮಿತಿಯಲ್ಲಿ ನಿರ್ಧರಿಸಲಾದಂತೆ ದಸರಾ ವಿಶೇಷಾಧಿಕಾರಿಗಳಿಂದ ರಚಿತವಾದ ಉಪಸಮಿತಿಗಳಿಗೆ ಬಿಡುಗಡೆ ಮಾಡಲಾಗುವ ಅನುದಾನದಲ್ಲಿ ದಸರಾ ಸಾಂಸ್ಕೃತಿಕ ಉಪಸಮಿತಿಗೆ ಒಟ್ಟು ರೂ.2,08,00,000/-ಗಳನ್ನು ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ ಇವರು ಬಿಡುಗಡೆ ಮಾಡಿರುತ್ತಾರೆ. |
| ಆ) | ಕಲಾವಿದರನ್ನು ಆಯ್ಕೆ ಮಾಡಿಕೊಳ್ಳಲು ಅನುಸರಿಸಿದ ಮಾರ್ಗಸೂಚಿಗಳೇನು; (ಮಾಹಿತಿ ನೀಡುವುದು) | ಪತ್ರಿಕಾ ಪ್ರಕಟಣೆ ನೀಡುವ ಮೂಲಕ ಹಾಗೂ ಆಕಾಶವಾಣಿಯಲ್ಲಿ ಪ್ರಚಾರ ಮಾಡುವ ಮೂಲಕ 15 ದಿನಗಳ ಕಾಲಾವಕಾಶ ನೀಡಿ ಸಾಂಸ್ಕೃತಿಕ ಕಾರ್ಯಕ್ರಮ ಪ್ರಸ್ತುತ ಪಡಿಸಲು ಆಸಕ್ತ ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗುತ್ತದೆ.<br><br>ನಂತರ ದಸರಾ ಸಾಂಸ್ಕೃತಿಕ ಉಪಸಮಿತಿಯ ಸಭಾ ನಡವಳಿಯಂತೆ ಕಲಾವಿದರ / ಕಲಾತಂಡದ ಆಯ್ಕೆಗೆ ಈ ಕೆಳಕಂಡಂತೆ ಮಾನದಂಡಗಳನ್ನು ಇರಿಸಲಾಗಿರುತ್ತದೆ.<br><br>1. ಶೇ.60 ರಷ್ಟು ಕರ್ನಾಟಕ ರಾಜ್ಯ ವ್ಯಾಪ್ತಿ ಕಲಾವಿದರಿಗೆ ಅವಕಾಶ ನೀಡುವುದು.<br>2. ಶೇ.20 ರಷ್ಟು ರಾಷ್ಟ್ರಮಟ್ಟದ ಕಲಾವಿದರಿಗೆ ಅವಕಾಶ ನೀಡುವುದು.<br>3. ಶೇ.20 ರಷ್ಟು ಅಂತರಾಷ್ಟ್ರೀಯ ಮಟ್ಟದ ಕಲಾವಿದರಿಗೆ ಅವಕಾಶ ನೀಡುವುದು.<br>4. ಎಲ್ಲಾ ಕಲಾಪ್ರಕಾರಗಳಿಗೆ ಆದ್ಯತೆ ನೀಡುವುದು.<br>5. ಪ್ರಾದೇಶಿಕ ಕಲೆಗಳಿಗೆ ಆದ್ಯತೆ ನೀಡುವುದು.<br>6. ಮಹಿಳೆಯರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲಾವಿದರಿಗೆ ಅವಕಾಶ ನೀಡುವುದು.<br>7. ವಿಶೇಷಚೇತನ ಕಲಾವಿದರಿಗೆ ಅವಕಾಶ ಕಲ್ಪಿಸುವುದು.<br>8. ಕಳೆದ 03 ವರ್ಷಗಳಲ್ಲಿ (2022, 2023 ಹಾಗೂ 2024) ಕಾರ್ಯಕ್ರಮ ನೀಡದೆ ಇರುವ ಕಲಾವಿದರು / ಕಲಾತಂಡಗಳನ್ನು ಗುರುತಿಸಿ ಕಾರ್ಯಕ್ರಮ ನೀಡಲು ಕ್ರಮವಹಿಸುವುದು.<br>9. ಒಬ್ಬ ಕಲಾವಿದ / ಕಲಾತಂಡಕ್ಕೆ ಒಂದು ವೇದಿಕೆಯಲ್ಲಿ ಮಾತ್ರ ಅವಕಾಶ ನೀಡುವುದು. |

| | | |
|---|---|---|
| | | 10. ಒಬ್ಬ ಕಲಾವಿದ ಬೇರೊಬ್ಬರ ಹೆಸರಿನಲ್ಲಿ ಅಥವಾ ಕಲಾತಂಡ / ಸಂಸ್ಥೆಯ ಹೆಸರಿನಲ್ಲಿ ಒಂದಕ್ಕಿಂದ ಹೆಚ್ಚು ಕಾರ್ಯಕ್ರಮ ಪಡೆಯದಂತೆ ನಿರ್ಬಂಧಿಸುವುದು.<br>11. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲು ತಂಡಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ವಿವಿಧ ಕಲಾಪ್ರಕಾರಗಳ ಹಿರಿಯ ಕಲಾವಿದರೊಂದಿಗೆ ಸಮಾಲೋಚಿಸಿ ಅವರ ಅಭಿಪ್ರಾಯ ಪಡೆದು ಅರ್ಜಿಗಳನ್ನು ಪರಿಶೀಲಿಸಿ, ಸಾಂಸ್ಕೃತಿಕ ಉಪಸಮಿತಿಯಲ್ಲಿ ನಿರ್ಣಯಿಸಿ ಕಾರ್ಯಕ್ರಮಗಳನ್ನು ನಿಗದಿಪಡಿಸುವುದು. |
| ಇ) | 5 ಲಕ್ಷಕ್ಕಿಂತ ಹೆಚ್ಚು ಮೊತ್ತದ ಕಾರ್ಯಕ್ರಮ ಗಳಿಗೆ ಪಾರದರ್ಶಕ ಕಾಯ್ದೆಗಳನ್ನು ಅನುಸರಿಸಲಾಗಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು) | ಕೆಲವೊಂದು ಪ್ರಸಿದ್ಧ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮಾತ್ರ ಕಲಾವಿದರ ಸಂಖ್ಯೆ ಹಾಗೂ ಅವರ ಪಕ್ಕವಾದ್ಯ ಸಂಖ್ಯೆಗೆ ಅನುಗುಣವಾಗಿ ನಿಯಮಾನುಸಾರ ರೂ.5.00 ಲಕ್ಷಕ್ಕೂ ಹೆಚ್ಚಿನ ಮೊತ್ತದ ಗೌರವ ಸಂಭಾವನೆ ನಿಗದಿಪಡಿಸಲಾಗುತ್ತದೆ.<br><br>ಈ ಸಂದರ್ಭದಲ್ಲಿ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ:ಆಇ 813 ವೆಚ್ಚ-12/2025, ದಿನಾಂಕ:10.09.2025 ರಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-1999 ಕಲಂ 4(ಜಿ) ಕಾಯ್ದೆಯಿಂದ ವಿನಾಯಿತಿ ನೀಡಿರುವ ಹಿನ್ನೆಲೆಯಲ್ಲಿ ನಿಯಮಾನುಸಾರ ಅನ್ವಯಿಸುವ ಎಲ್ಲಾ ತೆರಿಗೆಗಳನ್ನು ಕಟಾವಣೆ ಮಾಡಿ ಪಾವತಿಸಲು ಕ್ರಮವಹಿಸಲಾಗಿರುತ್ತದೆ. |

ಸಂಖ್ಯೆ: ಕಸಂವಾ 79 ಕವಿಸ 2026

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು